| District :Mysore | State : Karnataka |
|---|---|

## Department of Mines and Geology

ಗಣಿ ಮತ್ತು ಭೂವಿಜ್ಞಾನ ಇಲಾಖೆಯು 1971ರಿಂದಲೂ ಮೈಸೂರಿನಲ್ಲಿ ಕೆಲಸ ನಿರ್ವಹಿಸುತ್ತಿದೆ. 1987ರಲ್ಲಿ ಜಿಲ್ಲಾ ಪಂಚಾಯತ್ ಅಸ್ಥಿತ್ವಕ್ಕೆ ಬಂದ ನಂತರ ಈ ಕಛೇರಿಯು ಮೈಸೂರು ಜಿಲ್ಲಾ ಪಂಚಾಯತ್‌ನ ಆಡಳಿತ ವ್ಯಾಪ್ತಿಗೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿದೆ. ಚಾಮರಾಜನಗರ ಜಿಲ್ಲೆ ವಿಂಗಡಣೆಯಾದ ನಂತರವೂ ಸಹ ಅಲ್ಲಿ ಅಂತರ್ಜಲ ಕಛೇರಿ ಪ್ರಾರಂಭವಾಗದ ಕಾರಣ, ಆ ಜಿಲ್ಲೆಯ ಅಂತರ್ಜಲ ಕುರಿತ ತಾಂತ್ರಿಕ ಕೆಲಸ ಕಾರ್ಯಗಳನ್ನು ಈ ಕಛೇರಿಯಿಂದಲೇ ನಿರ್ವಹಿಸಿಕೊಂಡು ಬರಲಾಗುತ್ತಿದೆ.

ಈ ಕಛೇರಿಯ ಮುಖ್ಯ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತಿವೆ :-

1. ಸಾರ್ವಜನಿಕರಿಗೆ, ಸರ್ಕಾರಿ ಇಲಾಖೆಗಳಿಗೆ, ಸಂಘ ಸಂಸ್ಥೆಗಳಿಗೆ, ಕುಡಿಯುವ ನೀರಿಗೆ ಹಾಗೂ ವ್ಯವಸಾಯಕ್ಕಾಗಿ ಕೊಳವೆ ಬಾವಿ/ತೋಡು ಬಾವಿಗಳಿಗೆ ಭೂ ವೈಜ್ಞಾನಿಕ ಮತ್ತು ಭೂಭೌತ ವಿಧಾನಗಳಿಂದ ಸ್ಥಳಾಯ್ಕೆ ಮಾಡುವುದು.
2. ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಆಯ್ದ ವೀಕ್ಷಣಾ ಬಾವಿ/ಕೊಳವೆ ಬಾವಿಗಳಲ್ಲಿ ಪ್ರತೀ ಮಾಹೆಯಲ್ಲಿಯೂ ಅಂತರ್ಜಲಮಟ್ಟದ ದಾಖಲಾತಿ ಮತ್ತು ವಿಶ್ಲೇಷಣೆ.
3. ರಾಷ್ಟ್ರೀಯ ಜಲವಿಜ್ಞಾನ ಯೋಜನೆಯಡಿ ಹೆಚ್ಚುವರಿ ಕೊಳವೆ ಬಾವಿಗಳನ್ನು ನಿರ್ಮಿಸಿ, ಅವುಗಳಿಗೆ ಸ್ವಯಂಚಾಲಿತ ಜಲಮಟ್ಟ ಮಾಪಕ (DWLR) ಅಳವಡಿಸಿ, ಅವುಗಳಿಂದ ಅಂತರ್ಜಲದ ಏರಿಳಿತದ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸಿ ಮುಂದುವರೆದಂತೆ
   (GWDES & GEMS) ತಂತ್ರಾಂಶಗಳ ಮೂಲಕ ಗಣಕೀಕೃತ ವಿಶ್ಲೇಷಣೆ ಮಾಡುವುದು.
4. ಜಿಲ್ಲೆಯ ಅಂತರ್ಜಲ ಸಂಪನ್ಮೂಲಗಳ ಸಮೀಕ್ಷೆ ಮತ್ತು ಅನ್ವೇಷಣೆ ಕಾರ್ಯಕ್ರಮದಡಿ ರುಜಲಾನಯನ ಸಮೀಕ್ಷೆ, ಅಂತರ್ಜಲ ಸಂಪನ್ಮೂಲ ಪುನರ್ ಮೌಲೀಕರಣ ಮುಂತಾದ ಕೆಲಸಗಳನ್ನು ಕೈಗೊಳ್ಳಲಾಗುವುದು.
5. ಅಂತರ್ಜಲ ಗುಣಮಟ್ಟದ ಅಧ್ಯಯನ, ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ವಿವಿಧ ಋತುಮಾನಗಳಲ್ಲಿ ಬೇಸ್ ಮತ್ತು ಟ್ರೆಂಡ್ ಅಂತರ್ಜಲ ಮಾದರಿ ಸಂಗ್ರಹಣೆ, ರಾಸಾಯನಿಕ ವಿಶ್ಲೇಷಣೆ ಹಾಗೂ ವರದಿ ತಯಾರಿಕೆ.
6. ಅಂತರ್ಜಲ ಮರುಪೂರೈಕೆಗಾಗಿ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿ, ಸ್ಥಳ ಸೂಕ್ತ ಮರುಪೂರೈಕೆ ರಚನೆಗಾಗಿ ಸ್ಥಳಾಯ್ಕೆ ಮಾಡುವುದು, ತಾಂತ್ರಿಕ ಸಲಹೆ ನೀಡುವುದು, ಹಾಗೂ ಇಲಾಖೆವತಿಯಿಂದ ಪ್ರಾಯೋಗಿಕ ಅಂತರ್ಜಲ ಮರುಪೂರೈಕೆ ರಚನೆಗಳ ನಿರ್ಮಾಣ.
7. ಅಂತರ್ಜಲ ಪುನಶ್ಚೇತನಕ್ಕಾಗಿ ಬತ್ತಿಹೋಗಿರುವ ಕೊಳವೆ ಬಾವಿಗಳ ಮೂಲಕ ಜಲಧರೆಗೆ ಮಳೆ ನೀರಿನಿಂದ ಮರುಪೂರೈಕೆ ವಿಧಿವಿಧಾನಗಳು ಹಾಗೂ ತಾಂತ್ರಿಕ ಸಲಹೆ ನೀಡುವುದು ಮತ್ತು ಮಳೆ ಸೂರು ನೀರಿನ ಬಗ್ಗೆ ತಾಂತ್ರಿಕ ಸಲಹೆ.
8. ಲ್ಯಾಂಡ್ ಸ್ಯಾಟ್, ಕ್ವಿಕ್ ಬರ್ಡ್ ಮುಂತಾದ ಉಪಗ್ರಹ ಛಾಯಾ ಚಿತ್ರಗಳನ್ನು ಅರ್ಥೈಸಿ, ಅವುಗಳ ಸಹಾಯದಿಂದ ಅಂತರ್ಜಲ ವರತೆಯುಳ್ಳ ಪ್ರದೇಶಗಳನ್ನು ಗುರ್ತಿಸುವುದು.
9. ವಿಫಲ ತೋಡು ಬಾವಿಗಳ ಜಂಟೀ ತಪಾಸಣೆ ನಡೆಸಿ, ಜಂಟೀ ತಪಾಸಣೆ ಸಮಿತಿಗೆ ತಾಂತ್ರಿಕ ವರದಿ ನೀಡುವುದು.
10. ಅಂತರ್ಜಲದ ಮರುಪೂರೈಕೆ, ಅಂತರ್ಜಲದ ಮಾಲಿನ್ಯ, ಮಳೆ ನೀರಿನ ಸಂಗ್ರಹಣೆ, ಮುಂತಾದ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಇತ್ಯಾದಿ.

## ಜಿಲ್ಲಾ ಪಂಚಾಯತ್ ಮೈಸೂರು

**ಹಿರಿಯ ಭೂವಿಜ್ಞಾನಿಯವರ ಕಛೇರಿ, ಅಂತರ್ಜಲ ಗಣಿ ಮತ್ತು ಭೂವಿಜ್ಞಾನ ಇಲಾಖೆ**

*******

ಗಣಿ ಮತ್ತು ಭೂವಿಜ್ಞಾನ ಇಲಾಖೆಯು 1971 ರಿಂದಲೂ ಮೈಸೂರಿನಲ್ಲಿ ಕೆಲಸ ನಿರ್ವಹಿಸುತ್ತಿದೆ. 1987 ರಲ್ಲಿ ಜಿಲ್ಲಾ ಪಂಚಾಯತ್ ಅಸ್ಥಿತ್ವಕ್ಕೆ ಬಂದ ನಂತರ ಈ ಕಛೇರಿಯು ಮೈಸೂರು ಜಿಲ್ಲಾ ಪಂಚಾಯತ್‌ನ ಆಡಳಿತ ವ್ಯಾಪ್ತಿಗೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿದೆ. ಚಾಮರಾಜನಗರ ಜಿಲ್ಲೆ ವಿಂಗಡಣೆಯಾದ ನಂತರವೂ ಸಹ ಅಲ್ಲಿ ಅಂತರ್ಜಲ ಕಛೇರಿ ಪ್ರಾರಂಭವಾಗದ ಕಾರಣ, ಆ ಜಿಲ್ಲೆಯ ಅಂತರ್ಜಲ ಕುರಿತ ತಾಂತ್ರಿಕ ಕೆಲಸ ಕಾರ್ಯಗಳನ್ನು ಈ ಕಛೇರಿಯಿಂದಲೇ ನಿರ್ವಹಿಸಿಕೊಂಡು ಬರಲಾಗುತ್ತಿದೆ.

ಈ ಕಛೇರಿಯ ಕಾರ್ಯ ಚಟುವಟಿಕೆಗಳು ಮುಖ್ಯವಾಗಿ ಭೂವಿಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನಾ ಪರವಾಗಿ ಕೆಲಸ ನಿರ್ವಹಿಸುತ್ತಿದ್ದು ಅಂತರ್ಜಲ ಸರ್ವೇಕ್ಷಣೆ, ಜಲಾನಯನವಾರು ಅಂತರ್ಜಲ ಸ್ಥಿತಿ ಗತಿ ಬಗ್ಗೆ ಲೆಕ್ಕಾಚಾರ, ಅಂತರ್ಜಲಮಟ್ಟ ಏರಿಳಿತದ ಅಧ್ಯಯನದ ಸಲುವಾಗಿ ಅಧ್ಯಯನ ಬಾವಿಗಳ ಜಲಮಟ್ಟ ಮಾಪನ, ವರದಿ ತಯಾರಿಕೆ, ಅಂತರ್ಜಲ ಗುಣಮಟ್ಟದ ಬಗ್ಗೆ ಅಧ್ಯಯನ ಮುಂತಾದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

ಸಾರ್ವಜನಿಕರಿಗಾಗಿ ಹಾಗೂ ಸರ್ಕಾರಿ ಇಲಾಖೆಗಳಿಗೆ ವ್ಯವಸಾಯ ಮತ್ತು ವ್ಯವಸಾಯೇತರ ಉದ್ದೇಶಗಳಿಗಾಗಿ ಹಾಗೂ ಕುಡಿಯುವ ನೀರಿಗಾಗಿ ಭೂವೈಜ್ಞಾನಿಕ ಮತ್ತು ಭೂಭೌತ ವಿಧಾನಗಳಿಂದ ಕೊಳವೆ ಬಾವಿಗಳ ಸ್ಥಳಾಯ್ಕೆ, ವಿಫಲ ತೋಡು ಬಾವಿಗಳ ಜಂಟೀ ತಪಾಸಣೆ ನಡೆಸಿ ತಾಂತ್ರಿಕ ವರದಿ ನೀಡುವುದು, ಅಂತರ್ಜಲ ಮರುಪೂರೈಕೆ ಬಗ್ಗೆ ಸೂಕ್ತ ಭೂವೈಜ್ಞಾನಿಕ ಸ್ಥಳಾಯ್ಕೆ ಪ್ರಾಯೋಗಿಕವಾಗಿ ರಚನೆಗಳ ನಿರ್ಮಾಣ ಮಾಡುವುದು ಮುಂತಾದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

ಈ ಕಛೇರಿಗೆ ಯೋಜನೇತರ ಶೀರ್ಷಿಕೆಯಡಿ ವೇತನ ಮತ್ತು ಕಛೇರಿ ನಿರ್ವಹಣೆಗೆ ವೇತನೇತರ ಬಾಬ್ತು ಮಾತ್ರ ಅನುದಾನ ಹಂಚಿಕೆ ಮಾಡುತ್ತಿದ್ದು ಅಭಿವೃದ್ಧಿ ಕಾರ್ಯಕ್ಕೆ ನಿರ್ಧಿಷ್ಟವಾದ ಯಾವುದೇ ಅನುದಾನ ಇರುವುದಿಲ್ಲ. ಈ ಕಛೇರಿಗೆ ಲೆಕ್ಕ ಶೀರ್ಷಿಕೆ 2702-02-005-0-51 ಯೋಜನೇತರದಡಿಯಲ್ಲಿ 2006-07ನೇ ಸಾಲಿಗೆ ವೇತನಕ್ಕೆ ರೂ. 29.9 ಲಕ್ಷ ಹಾಗೂ ವೇತನೇತರ ಬಾಬ್ತು ರೂ.1.25 ಲಕ್ಷ ಅನುದಾನ ಹಂಚಿಕೆಯಾಗಿದ್ದು ಫೆಬ್ರವರಿ 2007 ರ ಅಂತ್ಯದವರೆಗೆ ವೇತನಕ್ಕೆ ರೂ.21.05 ಲಕ್ಷ ಮತ್ತು ವೇತನೇತರಕ್ಕೆ ರೂ.0.90 ಲಕ್ಷ ಬಿಡುಗಡೆಯಾಗಿರುತ್ತದೆ.

ಕಛೇರಿ ಸಿಬ್ಬಂದಿ ವಿವರ

| ಕ್ರಮ ಸಂಖ್ಯೆ | ಹುದ್ದೆಗಳು | ಮಂಜೂರಾದ ಹುದ್ದೆಗಳ ಸಂಖ್ಯೆ | ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಇರುವ ಹುದ್ದೆ |
|---|---|---|---|---|

| | | | | |
|---|---|---|---|---|
| 1 | ಹಿರಿಯ ಭೂ ವಿಜ್ಞನಿ | 1 | 1 | – |
| 2 | ಭೂ ವಿಜ್ಞಾನಿ | 4 | 1 | 3 |
| 3 | ಭೂಭೌತವಿಜ್ಞಾನಿ | 1 | 1 | – |
| 4 | ಕಿರಿಯ ಅಭಿಯಂತರ | 1 | 1 | – |
| 5 | ಪ್ರ.ದ.ಸಹಾಯಕ | 1 | 1 | – |
| 6 | ದ್ವಿ.ದ.ಸಹಾಯಕ | 2 | 1 | 1 |
| 7 | ಬೆರಳಚ್ಚುಗಾರರು | 1 | – | 1 |
| 8 | ವಾಹನ ಚಾಲಕ | 2 | 1 | 1 |
| 9 | ಗುಂಪು – ಡಿ ಹುದ್ದೆ | 2 | 2 | |

ಈ ಕಛೇರಿಯ ಮುಖ್ಯ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತಿವೆ :–

4. ಸಾರ್ವಜನಿಕರಿಗೆ, ಸರ್ಕಾರಿ ಇಲಾಖೆಗಳಿಗೆ, ಸಂಘ ಸಂಸ್ಥೆಗಳಿಗೆ, ಕುಡಿಯುವ ನೀರಿಗೆ ಹಾಗೂ ವ್ಯವಸಾಯಕ್ಕಾಗಿ ಕೊಳವೆ ಬಾವಿ/ತೋಡು ಬಾವಿಗಳಿಗೆ ಭೂ ವೈಜ್ಞಾನಿಕ ಮತ್ತು ಭೂಭೌತ ವಿಧಾನಗಳಿಂದ ಸ್ಥಳಾಯ್ಕೆ ಮಾಡುವುದು.

5. ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಆಯ್ದ ವೀಕ್ಷಣಾ ಬಾವಿ/ಕೊಳವೆ ಬಾವಿಗಳಲ್ಲಿ ಪ್ರತೀ ಮಾಹೆಯಲ್ಲಿಯೂ ಅಂತರ್ಜಲ ಮಟ್ಟದ ದಾಖಲಾತಿ ಮತ್ತು ವಿಶ್ಲೇಷಣೆ.

6. ರಾಷ್ಟ್ರೀಯ ಜಲವಿಜ್ಞಾನ ಯೋಜನೆಯಡಿ ಹೆಚ್ಚುವರಿ ಕೊಳವೆ ಬಾವಿಗಳನ್ನು ನಿರ್ಮಿಸಿ, ಅವುಗಳಿಗೆ ಸ್ವಯಂಚಾಲಿತ ಜಲಮಟ್ಟ ಮಾಪಕ (DWLR) ಅಳವಡಿಸಿ, ಅವುಗಳಿಂದ ಅಂತರ್ಜಲದ ಏರಿಳಿತದ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸಿ ಮುಂದುವರೆದಂತೆ
(GWDES & GEMS) ತಂತ್ರಾಂಶಗಳ ಮೂಲಕ ಗಣಕೀಕೃತ ವಿಶ್ಲೇಷಣೆ ಮಾಡುವುದು.

4. ಜಿಲ್ಲೆಯ ಅಂತರ್ಜಲ ಸಂಪನ್ಮೂಲಗಳ ಸಮೀಕ್ಷೆ ಮತ್ತು ಅನ್ವೇಷಣೆ ಕಾರ್ಯಕ್ರಮದಡಿ ಕಿರುಜಲಾನಯನ ಸಮೀಕ್ಷೆ, ಅಂತರ್ಜಲ ಸಂಪನ್ಮೂಲ ಪುನರ್ ಮೌಲೀಕರಣ ಮುಂತಾದ ಕೆಲಸಗಳನ್ನು ಕೈಗೊಳ್ಳಲಾಗುವುದು.

10. ಅಂತರ್ಜಲ ಗುಣಮಟ್ಟದ ಅಧ್ಯಯನ, ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ವಿವಿಧ ಋತುಮಾನ ಗಳಲ್ಲಿ ಬೇಸ್ ಮತ್ತು ಟ್ರೆಂಡ್ ಅಂತರ್ಜಲ ಮಾದರಿ ಸಂಗ್ರಹಣೆ, ರಾಸಾಯನಿಕ ವಿಶ್ಲೇಷಣೆ ಹಾಗೂ ವರದಿ ತಯಾರಿಕೆ.

11. ಅಂತರ್ಜಲ ಮರುಪೂರೈಕೆಗಾಗಿ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿ, ಸ್ಥಳ ಸೂಕ್ತ ಮರುಪೂರೈಕೆ ರಚನೆಗಾಗಿ ಸ್ಥಳಾಯ್ಕೆ ಮಾಡುವುದು, ತಾಂತ್ರಿಕ ಸಲಹೆ ನೀಡುವುದು, ಹಾಗೂ ಇಲಾಖೆವತಿಯಿಂದ ಪ್ರಾಯೋಗಿಕ ಅಂತರ್ಜಲ ಮರುಪೂರೈಕೆ ರಚನೆಗಳ ನಿರ್ಮಾಣ.

12. ಅಂತರ್ಜಲ ಪುನಶ್ಚೇತನಕ್ಕಾಗಿ ಬತ್ತಿಹೋಗಿರುವ ಕೊಳವೆ ಬಾವಿಗಳ ಮೂಲಕ ಜಲಧರೆಗೆ ಮಳೆ ನೀರಿನಿಂದ ಮರುಪೂರೈಕೆ ವಿಧಿವಿಧಾನಗಳು ಹಾಗೂ ತಾಂತ್ರಿಕ ಸಲಹೆ ನೀಡುವುದು ಮತ್ತು ಮಳೆ ಸೂರು ನೀರಿನ ಬಗ್ಗೆ ತಾಂತ್ರಿಕ ಸಲಹೆ.

13. ಲ್ಯಾಂಡ್ ಸ್ಯಾಟ್, ಕ್ವಿಕ್ ಬರ್ಡ್ ಮುಂತಾದ ಉಪಗ್ರಹ ಛಾಯಾ ಚಿತ್ರಗಳನ್ನು ಅರ್ಥೈಸಿ, ಅವುಗಳ ಸಹಾಯದಿಂದ ಅಂತರ್ಜಲ ವರತೆಯುಳ್ಳ ಪ್ರದೇಶಗಳನ್ನು ಗುರ್ತಿಸುವುದು.

14. ವಿಫಲ ತೋಡು ಬಾವಿಗಳ ಜಂಟೀ ತಪಾಸಣೆ ನಡೆಸಿ, ಜಂಟೀ ತಪಾಸಣೆ ಸಮಿತಿಗೆ ತಾಂತ್ರಿಕ ವರದಿ ನೀಡುವುದು.

10. ಅಂತರ್ಜಲದ ಮರುಪೂರೈಕೆ, ಅಂತರ್ಜಲದ ಮಾಲಿನ್ಯ, ಮಳೆ ನೀರಿನ ಸಂಗ್ರಹಣೆ, ಮುಂತಾದ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು

ಇತ್ಯಾದಿ.

**2006-07 ನೇ ಸಾಲಿನಲ್ಲಿ ಈ ಕಛೇರಿಯಿಂದ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳು.**

1. ಹುಣಸೂರು ಪಟ್ಟಣ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳ ಅಂತರ್ಜಲ ಗುಣಮಟ್ಟ ಅಧ್ಯಯನ, ಮುಂಗಾರು ನಂತರದ ಅವಧಿಗೆ 109 ಜಲಮಾದರಿಗಳಗಳನ್ನು ಸಂಗ್ರಹಿಸಿ ಪೂರ್ಣ ರಾಸಾಯನಿಕ ವಿಶ್ಲೇಷಣೆಗಾಗಿ ಇಲಾಖೆ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಹಾಗೂ ಭೂವೈಜ್ಞಾನಿಕ ಸರ್ವೆ ಕೈಗೊಳ್ಳಲಾಗಿದೆ.

2. ಅಧ್ಯಯನ ಬಾವಿಗಳ ಜಲಮಟ್ಟ ಮಾಪನ: ಈ ಕಛೇರಿ ವ್ಯಾಪ್ತಿಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಟ್ಟು 110 ಅಧ್ಯಯನ ಬಾವಿಗಳಲ್ಲಿ ಪ್ರತೀ ತಿಂಗಳು ಜಲಮಟ್ಟ ದಾಖಲಿಸಲಾಗುತ್ತಿದೆ. ಈ ಪೈಕಿ 29 ಸ್ವಯಂ ಚಾಲಿತ ಮಾಪಕಗಳಿಂದ ಜಲಮಟ್ಟ ಮತ್ತು ಉಷ್ಣಾಂಶಗಳ ವಿವರ ಸಂಗ್ರಹಿಸಿ ಗಣಕ ಯಂತ್ರಕ್ಕೆ ಅಳವಡಿಸಿ ವಿಶ್ಲೇಷಿಸುವುದು.

3. ನೀರಿನ ಮಾದರಿಗಳ ಸಂಗ್ರಹಣೆ: ಕುಡಿಯುವ ನೀರಿನ ಜಲಮಾದರಿಗಳ ಗುಣಮಟ್ಟ ಅಧ್ಯಯನದಡಿ ಎರಡೂ ಜಿಲ್ಲೆಗಳ ವಿವಿಧ ಗ್ರಾಮಗಳಿಂದ 179 ಜಲಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೊಳಪಡಿಸಿ ಫ್ಲೋರೈಡ್, ನೈಟ್ರೇಟ್ ಮತ್ತು ಕಬ್ಬಿಣಾಂಶ ಮುಂತಾದ ಘಟಕಗಳು ಪರಿಮಿತಿಗಿಂತ ಹೆಚ್ಚಾಗಿರುವ ಬಗ್ಗೆ ವರದಿ ಮಾಡಲಾಯಿತು.

ಅಧ್ಯಯನ ಬಾವಿಗಳ ಜಾಲದಿಂದ ಈಗಾಗಲೇ 92 ಬೇಸ್ ಮಾದರಿಗಳನ್ನು ಮತ್ತು 39 ಟ್ರೆಂಡ್ ಮಾದರಿಗಳನ್ನು ಜಲಮಟ್ಟ ಗುಣ ವಿಶ್ಲೇಷಣೆಗಾಗಿ ಸಂಗ್ರಹಿಸಿ ರಾಸಾಯನಿಕ ವಿಶ್ಲೇಷಣೆ ನಂತರ ವರದಿ ಮಾಡಲಾಯಿತು.

4. ಉಪಗ್ರಹ ಛಾಯಾಚಿತ್ರಗಳ ಅರ್ಥೈಸುವಿಕೆ: ಕರ್ನಾಟಕ ದೂರಸಂವೇದನಾ ಸಂಸ್ಥೆ ಕ್ವಿಕ್‌ಬರ್ಡ್ ಉಪಗ್ರಹ ಆಧಾರಿತ ಉಪಗ್ರಹ ಛಾಯಾಚಿತ್ರಗಳ ಭೂ ನಿಜಾಂಶ ಅಧ್ಯಯನದಡಿ ಮೈಸೂರು ತಾಲ್ಲೂಕಿನ ಸಿಂದುವಳ್ಳಿ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ.

5. ಅಂತರ್ಜಲ ಮರುಪೂರೈಕೆ ಸಮೀಕ್ಷೆ ಮತ್ತು ರಚನೆ: ಅಂತರ್ಜಲ ತೀವ್ರ ಕುಸಿದಿರುವ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕಿನ, ವೀರನಪುರ, ಮಡಹಳ್ಳಿ ಮತ್ತು ಕೆಲಸೂರು ಗ್ರಾಮಗಳ ವ್ಯಾಪ್ತಿಯಲ್ಲಿ ಕುಡಿಯುವ ನಿರಿನ ಮೂಲಗಳ ಸಂರಕ್ಷಣೆಗೆ ಆದ್ಯತೆ ನೀಡಿ ಇಲಾಖೆ ಅನುದಾನದಿಂದ 3 ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡಲಾಯಿತು.

6. ಮೈಸೂರು ನಗರ, ಪಿರಿಯಾಪಟ್ಟಣ, ಕೆ.ಆರ್.ನಗರ ಪುರಸಭೆಗಳಿಗೆ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಸೂಕ್ತ ಪ್ರದೇಶವನ್ನು ಗುರ್ತಿಸಲು ಸಂಬಂಧಿಸಿದ ಅಧಿಕಾರಿಗಳೊಡನೆ ಸರ್ವೇಕ್ಷಣೆ ಕೈಗೊಂಡು ವರದಿ ಮಾಡಲಾಗಿದೆ.

7. ವಿಫಲ ಬಾವಿ ಜಂಟೀ ತಪಾಸಣೆ: ತಾಲ್ಲೂಕುವಾರು ತಹಸೀಲ್ದಾರ್‌ರವರಿಂದ ಈ ಕಛೇರಿಗೆ ಪ್ರಸ್ತಾಪಿಸಲ್ಪಡುವ ವಿಫಲ ತೋಡು ಬಾವಿಗಳ ಜಂಟೀ ತಪಾಸಣೆ ನಡೆಸಿ, ತಾಂತ್ರಿಕ ವರದಿ ನೀಡಲಾಗುವುದು.

ಹಿರಿಯ ಭೂವಿಜ್ಞಾನಿ
**ಅಂತರ್ಜಲ**